ಸಂಜೆ ಮನೆಗೆ ಬಂದ ಗುರುರಾಜ ಹೆಂಡತಿಯ ಬಳಿ ಬೆಳಗ್ಗೆ ನಡೆದದ್ದನ್ನು ವಿವರಿಸಿದ. ಗುರುರಾಜನ ಹೆಂಡತಿ ಮಾಲತಿಗೆ ಗೋವಿಂದನೆಂದರೆ ಅಲರ್ಜಿ. ಹುಡುಗಿ ನೋಡುವ ಶಾಸ್ತ್ರದ ದಿನ ತೊಡೆ ಕಾಣುವಷ್ಟರ ತನಕ ಪಂಚೆ ಎತ್ತಿ ಮೀಸೆ ಒರೆಸಿಕೊಂಡದ್ದೇ ಅದಕ್ಕೆ ಕಾರಣ ಎಂದು ಅವಳು ಬಾಯ್ಬಿಟ್ಟು ಹೇಳದಿದ್ದರೂ ಗುರುರಾಜನಿಗೆ ಅದು ಗೊತ್ತಿತ್ತು. ಜೊತೆಗೆ ಅಣ್ಣನಿಗೆ ಗೊತ್ತು ಮಾಡಿದ ಹುಡುಗಿಯನ್ನು ತಮ್ಮ ಮದುವೆಯಾದ, ಹುಡುಗಿಯದೇ ಯಡವಟ್ಟು ಬಿಡಿ, ಇವನು ಸುಮ್ಮನೇ ಕೂತಿದ್ನಂತೆ ಎಂಬೆಲ್ಲಾ ಮಾತುಗಳು ಅಲ್ಲಲ್ಲಿ ಹೊರಬಿದ್ದ ಮೇಲಂತೂ ಗೋವಿಂದನ ಹೆಸರು ಕೇಳಿದರೂ ಉರಿದು ಬೀಳುತ್ತಿದ್ದಳು ಮಾಲತಿ. ಇಂತಹ ಗೋವಿಂದನಿಗೆ ದಿನವೂ ತಿಂಡಿ ಮಾಡಿ ಹಾಕು ಎಂದರೆ ಅವಳಾದರೂ ಹೇಗೆ ಸಹಿಸಿಕೊಂಡಾಳು. ಗುರುರಾಜ ಅವಳಿಂದ ಒಂದು ಜನ್ಮಕ್ಕಾಗುವಷ್ಟು ಬೈಸಿಕೊಂಡ. ಬೆಳಗ್ಗೆ ಗೋವಿಂದನ ಅವಸ್ಥೆ ನೋಡಿ ಗುರುರಾಜ ಆಡಿದ ಮಾತುಗಳೆಲ್ಲಾ ತಕ್ಷಣಕ್ಕೆ ಹೊರಬಿದ್ದಿದ್ದವೇ ವಿನಃ ಮಾಲತಿಯ ವಿರೋಧವಾಗಲೀ, ಅದನ್ನು ಎದುರಿಸುವ ಬಗೆಯಾಗಲೀ ಗುರುರಾಜನ ಕಲ್ಪನೆಯಲ್ಲಿರಲಿಲ್ಲ. ಸತತ ವಿರೋಧದ ನಡುವೆಯೂ ಪಟ್ಟುಬಿಡದ ಗುರುರಾಜ ಬೆಳಗ್ಗೆ ಬಾಗಿಲು ಸದ್ದಾಗುವಷ್ಟರಲ್ಲಿ ಹೆಂಡತಿಯನ್ನು ತಾತ್ಕಾಲಿಕವಾಗಿ ಒಪ್ಪಿಸಿ ಪರಿಸ್ಥಿತಿಯನ್ನು ತಿಳಿಗೊಳಿಸಿದ್ದ.

